ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧ ಪಟ್ಟಂತೆ ಬಹಳ ಪ್ರಶ್ನೆಗಳನ್ನು ಕಳುಹಿಸಿದ್ದೆ, ಅವು ಒಂದೂ ಬರಲಿಲ್ಲ. ಅವರ ಆಫೀಸಿಗೂ ಹೋಗಿ ನೋಡಿದೆ. ನನ್ನ ತಾಲ್ಲೂಕಿನಲ್ಲಿಯೇ ಕ್ಯಾಂಪ್ ಮಾಡುತ್ತಾ ಇದ್ದಾರೆ, ನನಗೇ ಅವರ ಪ್ರೋಗ್ರಾಂ ಕಳುಹಿಸಿಲ್ಲ, ನನ್ನ ತಾಲ್ಲೂಕಿನ ಕಷ್ಟಸುಖ ನಾನು ಹೇಳಿಕೊಳ್ಳುವುದು ಬೇಡವೆ ?

Mr. SPEAKER.—What is it that the Hon'ble Member is saying ? Nothing has been mentioned.

Sri S. M. KRISHNA.—I wanted to draw the attention..........

Sri S. SIVAPPA (Sravanabelagoala).—Sir, the Minister for Social Welfare is not found either in the office or residence, and the Tour programme is also not there. We wanted to know whether the Minister is on leave.

Mr. SPEAKER.—I am not allowing it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಪೋಲೀಸಿನವರು ಇಲ್ಲೆಲ್ಲಾ ಓಡಾಡುತ್ತಾ ಇದ್ದಾರೆ, ಶ್ರೀ ಕೃಷ್ಣ ಶೆಟ್ಟರ ಬೆನ್ನುಗಾವಲಾಗಿದ್ದಾರೆ ಎಂದು ನಿನ್ನೆ ನಾನು ಹೇಳಿದಾಗ ತಾವು ಮೂರೂ ಮುಕ್ಕಾಲು ಗಂಟೆಗೆ ಈ ವಿಷಯದ ಬಗ್ಗೆ ಹೇಳುತ್ತೇನೆಂದು ಅಪ್ಪಣೆ ಕೊಡಿಸಿದ್ದಿರಿ. ಅದು ಏನಾಯಿತು ?

Mr. SPEAKER.—The Hon'ble Member, Sri Krishna Shetty met me yesterday, I think, late in the evening after about 7 P.M. or 7·30 P.M. I have heard him. I have to get a little more information and I will mention it at 3-45 P.M. to-day.

THE MYSORE HIGHWAYS BILL, 1963.

(Debate continued.)

Motion to consider.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).–ಮಾನ್ಯ ಸಭಾಪತಿಗಳೆ, ನಮ್ಮ ಮುಂದಿರತಕ್ಕ ಮೈಸೂರು ಹೈವೇಸ್ ಬಿಲ್ಲಿನ ಮುಖ್ಯ ಉದ್ದೇಶವನ್ನು ಸ್ವಾಗತಿಸಬೇಕಾಗಿದ್ದರೂ, ಇದನ್ನು ಕಾನೂನಿನ ಕಡತಕ್ಕೆ ಏರಿಸುವ ಪೂರ್ವದಲ್ಲಿ ಮಾನ್ಯ ಮಂತ್ರಿಗಳು ಇದರಿಂದ ಆಗತಕ್ಕಂಥ ಅನಾಹುತ ವೇನು ಎಂಬುದರ ಬಗ್ಗೆ ಬಹಳ ಜೋಪಾನವಾಗಿ ನೋಡಬೇಕಾಗಿ ಬಂದಿದೆ. ತಾವು ಬಿಲ್ಲನ್ನು ತಂದಿರತಕ್ಕಂಥ ಉದ್ದೇಶ ಚೆನ್ನಾಗಿದೆ. ಆದರೆ ಈ ಬಿಲ್ಲಿನಲ್ಲಿರತಕ್ಕ ಕೆಲವು ಅಂಶಗಳನ್ನು ಸ್ವಲ್ಪ ಯೋಚನೆಮಾಡುವುದಾದರೆ ಅದರಲ್ಲಿ ಬಹಳ ಲೋಪದೋಷಗಳಿವೆ ಎಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ಕೂಲಂಕಷವಾಗಿ ವಿಮರ್ಶಿಸಲು ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಮೊದಲು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಈ ಬಿಲ್ಲಿನಲ್ಲಿ ರಸ್ತೆಗಳನ್ನು ಐದು ತರಹ ಕ್ಲಾಸಿಫೈ ಮಾಡಿದ್ದೀರ: ಅವು ಯಾವುದೆಂದರೆ: State Highways (Special), State Highway, Major District Road, Other District Road and Village Road. ಇವುಗಳ ಬಗ್ಗೆ ಕ್ಲಾರಿಫಿಕೇಷನ್ ಬೇಕಾಗಿದೆ. ತಾವು ಇದರಲ್ಲಿ ಯಾವಯಾವ ರಸ್ತೆ ಅಗಲ ಎಷ್ಟೆಷ್ಟು ಇರಬೇಕೆಂದು ವಿಶದಪಡಿಸಿಲ್ಲ. ಈಗಿರತಕ್ಕಂಥ ಅನೇಕ ರಸ್ತೆಗಳು ಮೇಜರ್ ಡಿಸ್ಟ್ರಿಕ್ಟ್ ರೋಡ್ ಅಥವಾ ಸ್ಟೇಟ್ ಹೈವೆ. ಬಹುಶಃ ಯಾವಯಾವ ರಸ್ತೆಯು ಅಗಲ ಎಷ್ಟಿರಬೇಕೆಂಬುದನ್ನು ರೂಲ್ಸಿನಲ್ಲಿ ನಮೂದು ಮಾಡುವ ಅಭಿಪ್ರಾಯ ತಮಗಿರಬಹುದು. ಆದರೆ ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರದೆ ಇರುವುದರಿಂದ ಒಂದು confused state of affairs ಆಗಿದೆ.

ತಾವು ಬೆಟರ್‌ಮೆಂಟ್‌ಲೆವಿಯಿಂದ ಎಂಟು ಲಕ್ಷ ರೂಪಾಯಿ ಉತ್ಪತ್ತಿ ಬರುತ್ತದೆಂದು ಹೇಳಿದ್ದೀರಿ. ಅದು ಹೇಗೆ ಬರುತ್ತದೆ, ಅದನ್ನು ಯಾವ ಆಧಾರದ ಮೇಲೆ ನಿರೀಕ್ಷಿಸಿದ್ದೀರಿ ಎನ್ನತಕ್ಕಂಥಾದ್ದನ್ನು ವಿಶದಪಡಿಸಿಲ್ಲ. ತಾವು ಯಾವ ಬೇಸಿಸ್ ಮೇಲೆ ಇದನ್ನು ನಿರೀಕ್ಷಿಸಿದ್ದೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ನಿಮ್ಮ ಅಭಿಪ್ರಾಯವನ್ನು ಮೊದಲು ತಿಳಿದುಕೊಳ್ಳಬೇಕು. ಈಗ ಉದಾಹರಣೆಗೆ ಹಾಸನ—

(ಶ್ರೀ ಎಚ್. ಡಿ. ದೇವೇಗೌಡ)

ಮೈಸೂರು ಒಂದು ರಸ್ತೆ ಇದೆ. ಈಗ ಅದನ್ನು ಸ್ಟೇಟ್ ಹೈವೆ ಆಗಿ ಡಿಕ್ಲೇರ್ ಮಾಡಿದರೆ, ಆ ರಸ್ತೆಗೆ ಅಕ್ಕಪಕ್ಕದಲ್ಲಿರತಕ್ಕಂಥ ಜಮೀನಿನ ಬೆಲೆ ಎಷ್ಟು ಜಾಸ್ತಿಯಾಗುತ್ತದೆ, ಯಾವ ಪ್ರಕಾರ ಜಾಸ್ತಿ ಯಾಗುತ್ತದೆ ಎಂಬುದನ್ನು ತಿಳಿಸಬೇಕು. ಅಮೇಲೆ ಜಮೀನಿನ ಮಾಲಿಕ ಹೇಗೆ ಬೆಟರ್‌ಮೆಂಟ್ ಲೆವಿ ಕೊಡಬೇಕಾಗುತ್ತದೆ ಎನ್ನುವುದನ್ನೂ ತಿಳಿಸಬೇಕು. ಏಕೆಂದರೆ ಪ್ರಾಕ್ಟಿಕಲ್ಲಾಗಿ ಈ ಮಸೂದೆಯನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಕಾಲದಲ್ಲಿ ಕಷ್ಟ ಬರುತ್ತದೆ. ಬೆಟರ್‌ಮೆಂಟ್ ಲೆವಿ ಎಂಟು ಲಕ್ಷ ರೂಪಾಯಿ ಬರುತ್ತದೆಂದು ಯಾವ ಆಧಾರದ ಮೇಲೆ ನಿಗದಿಮಾಡಿದ್ದಾರೆಂದು ಹೇಳಿದರೆ ನಾವೂ ಸ್ವಲ್ಪ ಯೋಚನೆ ಮಾಡಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಇದು ಅತುರವಾಗಿ ಪಾಸು ಮಾಡುವ ವಿಷಯವಲ್ಲ; ಇದು ಹುಷಾರಾಗಿ ಯೋಚನೆಮಾಡುವ ವಿಷಯ.

ರೋಡ್‌ವಿಡ್ತನ್ನು ಸ್ಪೆಸಿಫಿಕ್ಕಾಗಿ ನಮೂದು ಮಾಡಬೇಕು. ಇದು ನಮಗೆ ಸ್ವಲ್ಪ ಕನ್‌ಫ್ಯೂಷನ್ ಉಂಟುಮಾಡಿದೆ. ರೋಡು 150–200–80–70 ಅಡಿ ಇರಬೇಕೆ ಏನು ಎಂಬುದನ್ನೇನೂ ನಮೂದು ಮಾಡಿಲ್ಲ. ಈ ಕಂಟ್ರೋಲ್ ಲೈನ್, ಬಿಲ್ಡಿಂಗ್ ಲೈನ್, ಹೈವೆ ಬೌಂಡರಿ, ಇವುಗಳ ಅಂತರ, ಅಗಲ ಎಷ್ಟು ಎನ್ನುವುದನ್ನು ಸ್ಪೆಸಿಫಿಕ್ಕಾಗಿ ಹೇಳಲಿಲ್ಲ. ಮಸೂದೆಯಲ್ಲಿ ಓದಿದರೆ ಅರ್ಥವಾಗುವುದಿಲ್ಲ. ಸ್ಪಷ್ಟವಾಗಿ ಕೊಟ್ಟಿದ್ದರೆ ನಮಗೆ ಅನುಮಾನ ಬರುವುದಕ್ಕೆ ಅವಕಾಶವಿರಲಿಲ್ಲ.

ಫೈನಾನ್‌ಷಿಯಲ್ ಮೆಮೊರಾಂಡಂನಲ್ಲಿ ಸಿಬ್ಬಂದಿಗಾಗಿ ಎಂಟು ಲಕ್ಷ ರೂಪಾಯಿ ಬೇಕು ಎಂದು ಹೇಳಿದ್ದೀರಿ. ಒಂದೊಂದು ಸಬ್-ಡಿವಿಜನ್ನಿಗೆ ಒಬ್ಬ ಸೂಪರ್‌ವೈಸರ್, ಒಬ್ಬ ಗುಮಾಸ್ತೆಯನ್ನಿಟ್ಟು ಕೊಂಡು ಲೈಸೆನ್ಸ್ ಕೊಡತಕ್ಕವರಿಗೆ ಎಷ್ಟು ಬೇಕೋ ಅಷ್ಟು ಸಿಬ್ಬಂದಿಯನ್ನು ಇಟ್ಟುಕೊಳ್ಳುತ್ತೇವೆ, ಅದು ಸಾಕು ಎಂದು ಹೇಳಿದ್ದೀರಿ. ಇದರಲ್ಲಿ ಏನಾಗುತ್ತದೆ ಎಂದರೆ, ಮೂಲವಾಗಿ ಸರಿಯಾಗಿದ್ದರೂ ಅದನ್ನು ಕಾರ್ಯಗತ ಮಾಡುವುದರಲ್ಲಿ ಬಹಳ ಅಡ್ಡಿ ಬರುತ್ತದೆ. ಇದರಿಂದ ಮನುಷ್ಯನಿಗೆ ಇರತಕ್ಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರುವರೆಂದು ಕಾಣುತ್ತದೆ. ಒಂದು ಹಳೆ ಮನೆ ಇರುತ್ತದೆ. ರಸ್ತೆಯಿಂದ ಒಂದು ಫರ್ಲಾಂಗ್ ದೂರ ಬಿಲ್ಡಿಂಗ್ ಲೈನ್ ಗೊತ್ತುಮಾಡಿದರೆ ಅ ಮಾರ್ಜಿನ್‌ನಲ್ಲಿ ಏನೂ ಬದಲಾವಣೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ ಎಂದು ಗೊತ್ತಾಗುತ್ತದೆ. ಹೈವೇ ಅಥಾರಿಟಿ ಹತ್ತಿರ ಬಂದು ಅವರಿಂದ ಪರ್ಮಿಷನ್ ಪಡೆಯಬೇಕು. ಒಂದು ಕಾಂಪೌಂಡು ಹಾಕಬೇಕಾ ದರೆ, ಹಳೆ ಮನೆಯ ರಿಪೇರಿ ಮಾಡಬೇಕಾದರೆ ಅದಕ್ಕೆ ಹೈವೇ ಅಥಾರಿಟಿ ಹತ್ತಿರ ಅನುಮತಿ ಪಡೆಯಬೇಕು ಎಂದು ಹೇಳತಕ್ಕದ್ದು ಸರಿಕಾಣುವುದಿಲ್ಲ. ಇನ್ನು ನೂರು ವರ್ಷಗಳ ನಂತರ ಆಗತಕ್ಕ ರಸ್ತೆಗಳ ಅವಶ್ಯಕತೆ ಏನು, ಆಗ ರಸ್ತೆಗಳ ಅಗಲ ಎಷ್ಟು ಇರಬೇಕಾಗುತ್ತದೆ ಎನ್ನುವ ಬಗ್ಗೆ ಮುಂದಾಲೋಚನೆಯಿಂದ ಈ ಮಸೂದೆಯನ್ನು ತರುತ್ತಿದ್ದೀರಿ ಎಂದು ಕಾಣುತ್ತದೆ. ಆದರೆ ಇವತ್ತು ಅಕ್ವಿಜಿಷನ್ ಮಾಡಿಕೊಳ್ಳಲು ಏನು ಕೊಡಬೇಕಾಗುತ್ತದೆ, ಮಾಲೀಕನಿಗೆ ಏನು ಕಾಂಪೆನ್ ಸೇಷನ್ ಕೊಡಬೇಕು ಎಂಬುದನ್ನು ನಮೂದು ಮಾಡಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗೂ ಸ್ಟೇಟ್ ಫಂಡ್ ರಸ್ತೆಗೂ ಇರತಕ್ಕದ್ದು 80 ಅಡಿ ಅಗಲ. ನ್ಯಾಷನಲ್ ಹೈವೇ 150 ಅಡಿ ಮಾಡಬೇಕಾದರೆ ಅಕ್ವಿಜಿಷನ್ ಚಾರ್ಜನ್ನು ಎಲ್ಲಿ ತೋರಿಸಿದ್ದೀರಿ ? ಅದನ್ನು ಎಲ್ಲಿಯೂ ತೋರಿಸಿಲ್ಲ.

† ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಕ್ವಿಜಿಷನ್ ಚಾರ್ಜಸ್ ಇದರಲ್ಲಿ ಎಲ್ಲಿ ಬರುತ್ತದೆ ? ಯಾವುದೇ ರಸ್ತೆಯನ್ನು ಅಭಿವೃದ್ಧಿ ಮಾಡಬೇಕು ಎಂದರೆ, ಹೊಸದಾಗಿ ಮಾಡಬೇಕು ಎಂದರೆ, ಅಧಿಕಾರಿಗಳು ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ಕಳುಹಿಸು ತ್ತಾರೆ. ಅದು ಬಂದ ಮೇಲೆ ಅದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ. ಅದರಲ್ಲಿ ಅಕ್ವಿಜಿಷನ್ ಕಾಸ್ಟ್ ಪ್ರತಿಯೊಂದೂ ಬರುತ್ತದೆ. ಕಾನೂನು ಪ್ರಕಾರ ಹೈವೇ ಅಥಾರಿಟಿ ಯಾರಿರುತ್ತಾರೋ ಅವರು ಅಕ್ವಿಜಿಷನ್ ಕಾಸ್ಟ್ ಕೊಡುತ್ತಾರೆ. ಅದು ಸಾಕಷ್ಟಿಲ್ಲ ಎಂದರೆ ಕೋರ್ಟಿಗೆ ಹೋಗಬಹುದು. ಅದಕ್ಕೆ ಈ ಮಸೂದೆಯಲ್ಲಿ ಅವಕಾಶವಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮೊದಲು ಕಂಟ್ರೋಲ್ ಲೈನ್, ಬಿಲ್ಡಿಂಗ್ ಲೈನ್ ಇವುಗಳನ್ನು ಸ್ಪಷ್ಟಪಡಿಸಿದರೆ ಅದರ ಮೇಲೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಕೆಲವು ಟೆಕ್ನಿಕಲ್ ಅಧಿಕಾರಿಗಳ ಹತ್ತಿರ ಈ ಬಗ್ಗೆ ಚರ್ಚೆ ಮಾಡಿದೆ. ಬೌಂಡರಿ ಲೈನ್‌ಗೂ, ಕಂಟ್ರೋಲ್ ಲೈನಿಗೂ ಮಧ್ಯೆ ಬರತಕ್ಕ ಒಂದು ಕಟ್ಟಡ ಏನಿದೆ ಅದರ ಮೇಲೆ ನಿರ್ಬಂಧ ಹಾಕುವುದು ಹೇಗೆ ಎಂದು. ಇಂಥ ಜಾಗವನ್ನು ನೀವು ಈಗ ಅಕ್ವೈರ್ ಮಾಡಿಕೊಳ್ಳುವುದಿಲ್ಲ; ಡಿಕ್ಲೇರ್ ಮಾಡುತ್ತೀರಿ. ಅವನ ಸ್ವಂತ ಆಸ್ತಿಯ ಮೇಲೆ ಅವನಿಗೆ ಅಧಿಕಾರವಿಲ್ಲದಂತಾಗುತ್ತದೆ. ಏನಾದರೂ ಬದಲಾವಣೆಯನ್ನು ಮಾಡು ವುದಕ್ಕಾಗಲೀ ರಿಪೇರಿ ಮಾಡುವುದಕ್ಕಾಗಲೀ ಆಗದಂತೆ ನಿರ್ಬಂಧವನ್ನು ಹಾಕಿದ್ದೀರಿ. ಹೆದ್ದಾರಿಗಳ ಅಗಲ ಎಷ್ಟು ಎನ್ನುವುದನ್ನು ಇದರಲ್ಲಿ ಸ್ಪಷ್ಟಪಡಿಸಬೇಕು.

†ಶ್ರೀ ವೀರೇಂದ್ರ ಪಾಟೀಲ್.—ನಾವು ಇವತ್ತು ಕಂಟ್ರೋಲ್ ಲೈನ್ ಎಷ್ಟು, ಬಿಲ್ಡಿಂಗ್ ಲೈನ್ ಎಷ್ಟು ಎಂದು ಹೇಳುವುದು ಕಷ್ಟವಾಗುತ್ತದೆ. ಇದರಲ್ಲಿ ವಿಲೇಜ್ ರೋಡ್ ಬರಬಹುದು, ಡಿಸ್ಟ್ರಿಕ್ಟ್ ರೋಡ್ ಬರಬಹುದು, ಮೇಜರ್ ಡಿಸ್ಟ್ರಿಕ್ಟ್ ರೋಡ್ ಬರಬಹುದು, ಹೈವೇ ಬರಬಹುದು, ಸ್ಪೆಷಲ್ ಹೈವೇ ಬರಬಹುದು. ಈ ಎಲ್ಲ ರಸ್ತೆಗಳಿಗೂ ಬೌಂಡರಿ ಲೈನ್, ಬಿಲ್ಡಿಂಗ್ ಲೈನ್, ಕಂಟ್ರೋಲ್ ಲೈನ್ ಒಂದೇ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಒಂದೊಂದು ವಿಧದ ರಸ್ತೆಗೂ ಬೇರೆ ಬೇರೆ ವಿಧವಾಗಿ ಇಡಬೇಕಾಗುತ್ತದೆ. ಅದಕ್ಕಾಗಿ ಕ್ಲಾಜ್ 9ರಲ್ಲಿ ಅಧಿಕಾರವನ್ನು ಕೊಟ್ಟಿದ್ದೇವೆ. ಅದೆಲ್ಲವನ್ನು ಕೊಟ್ಟಿದ್ದೇವೆ. ಅದೆಲ್ಲವನ್ನೂ ಇದೇ ಮಸೂದೆಯಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಹೈವೇ ಎಂದರೆ 120 ಅಡಿ ಇರುತ್ತದೆ, 80 ಅಡಿ ಇರುತ್ತದೆ. ಈರೀತಿ ಇರುವುದರಿಂದ ವ್ಯತ್ಯಾಸವಾಗುತ್ತದೆ. ಎಲ್ಲದಕ್ಕೂ ಒಂದೇ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಬಿಲ್ಡಿಂಗ್ ಲೈನ್, ಕಂಟ್ರೋಲ್ ಲೈನ್ ಇದನ್ನೆಲ್ಲ ಖಚಿತವಾಗಿ ಇದರಲ್ಲಿಯೇ ಹಾಕಿದ್ದರೆ ನಮಗೆ ಏನೂ ಅನುಮಾನ ಬರುತ್ತಿರಲಿಲ್ಲ.

† ಶ್ರೀ ವೀರೇಂದ್ರ ಪಾಟೀಲ್.—ಹಾಗೆ ಮಾಡಲು ತೊಂದರೆಗಳಿವೆ. It differs from road to road.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್ ಹೈವೇ, ಸ್ಪೆಷಲ್ ಸ್ಟೇಟ್ ಹೈವೇ ಎಂದು ಹೇಳಿದರು. ಸ್ಪೆಷಲ್ ಸ್ಟೇಟ್ ಹೈವೇ ಎಂದರೆ ಏನು ಎಂದು ಹೇಳುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಕೆಲವು ಸ್ಟೇಟ್ ಹೈವೇಗಳು ಅದಿರನ್ನು ಸಾಗಿಸತಕ್ಕ ರಸ್ತೆಗಳಾಗಿವೆ, ಪಶ್ಚಿಮ ಕರಾವಳಿ ರಸ್ತೆ ಇದೆ, ಇಂಥ ರಸ್ತೆಗಳನ್ನು ಒಂದು ಕ್ಯಾಟೊಗರಿಯಾಗಿ ಕ್ಲಾಸಿಫಿಕೇಷನ್ ಮಾಡುತ್ತೇವೆ. ನಮ್ಮ ರಾಜ್ಯದಲ್ಲಿರುವ ರಸ್ತೆಗಳನ್ನೇ ಈರೀತಿಯಾಗಿ ಕ್ಲಾಸಿಫಿಕೇಷನ್ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕಾಂಪೆನ್‌ಸೇಷನ್ ಕೊಡುವಾಗ 'the orders of the Highway Authority is final' ಎಂದು ಹೇಳಿದ್ದೀರಿ. ಯಾರಿಗೆ ಅಪೀಲು ಹಾಕಬೇಕು, ಡೆಪ್ಯುಟಿ ಕಮಿಷನರಿಗೆ ಹಾಕಬೇಕೇ, ಯಾರಿಗೆ ಹಾಕಬೇಕು ಎನ್ನುವುದಕ್ಕೆ ಇದರಲ್ಲಿ ಏನೂ ಹೇಳಿಲ್ಲ. ಅಪೀಲಿಗೇ ಅವಕಾಶವಿಲ್ಲ. ಕ್ರಾಪ್ ಕಾಂಪೆನ್‌ಸೇಷನ್ ಕೊಡುವಾಗ ಟೆಕ್ನಿಕಲ್ ಅಧಿಕಾರಿಗಳಿಗೆ ಅಧಿಕಾರ ಕೊಡುವುದಕ್ಕೆ ಬದಲಾಗಿ ರೆವಿನ್ಯೂ ಅಧಿಕಾರಿಗಳಿಗೆ ಅವಕಾಶ ಕೊಡತಕ್ಕದ್ದು ಸೂಕ್ತ.

† **Sri VEERENDRA PATIL.**—Clause 35 :

"(1) Any person aggrieved by the award of the Highway Authority or the officer authorised under Section 28 may, by written application to the Highway Authority or such officer, require that the matter be referred to the Court of the Civil Judge within the limits of whose jurisdiction the land in relation to which the award is made is situate."

"(2) Any such application shall be made within six weeks from the date of the award, and shall be in such form as may be prescribed."

"(3) The provisions of Sections 5, 12 and 14 of the Indian Limitation Act, 1908, shall apply to the computation of the time fixed for reference under sub-section 2."

We have not given any option to the Highway Authority. If he receives an application, there is no option. He has to refer it to the court.

Sri H. D. DEVE GOWDA.—But in clause 32, you have said that the decision of the Highway Authority shall be final.

ಹೈವೇಗಳ ಮೇಂಟೆನೆನ್ಸ್ ಬಗ್ಗೆ, ರಸ್ತೆಗಳ ಮೇಂಟೆನೆನ್ಸ್ ಬಗ್ಗೆ ಹೇಳಿದ್ದಾರೆ. ಪ್ರಿಕಾಷನ್ಸ್ ಏನೇನು ತೆಗೆದುಕೊಳ್ಳಬೇಕು. ಭಾರವಾದ ವಾಹನಗಳನ್ನು ಓಡಿಸುವುದರ ಬಗ್ಗೆ ನಿರ್ಬಂಧ ಹಾಕುವುದು ಇದನ್ನೆಲ್ಲ ಹೇಳಿದ್ದಾರೆ. ಅದು ಸೂಕ್ತ. ನನಗೆ ತಿಳಿದವಟ್ಟಿಗೆ ಹೇಳುವುದಾದರೆ ಮದ್ರಾಸ್ ರಾಜ್ಯದಲ್ಲಿ ರಸ್ತೆಗಳಿಗಾಗಿಯೇ ಪ್ರತ್ಯೇಕ ಡಿವಿಜನ್ನುಗಳು, ಸಬ್-ಡಿವಿಜನ್ನುಗಳೂ ಇವೆ. ನಮ್ಮಲ್ಲಿ ಪ್ರತ್ಯೇಕ ಚೀಫ್ ಇಂಜಿನಿಯರಿದ್ದಾರೆ. ಆದರೆ ಡಿವಿಷನ್ ಮತ್ತು ಸಬ್-ಡಿವಿಷನ್ ತೆಗೆದುಕೊಂಡರೆ ಅಲ್ಲಿ ಎಲ್ಲ ಕಲಸುಮೇಲೋಗರ ಎನ್ನುವಂತೆ ಎಲ್ಲವನ್ನೂ ಸೇರಿಸಿದ್ದಾರೆ. ಇದರಿಂದ ರಸ್ತೆಗಳನು

(SRI H. D. DAVE GOWDA)

ಸರಿಯಾದ ರೀತಿಯಲ್ಲಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಮದ್ರಾಸ್ ರಾಜ್ಯದಲ್ಲಿ 50 ಮೈಲಿ, 100 ಮೈಲಿಗೆ ಒಂದೊಂದು ಶಾಖೆ, ಒಂದೊಂದು ಯೂನಿಟ್ ಮಾಡಿಕೊಂಡಿದ್ದಾರೆ. ಅದಕ್ಕೇ ಪ್ರತ್ಯೇಕ ವಾದ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರು, ಸೂಪರ್‌ವೈಸರು ಇದ್ದಾರೆ. ಅವರು ರಸ್ತೆಗಳ ಮೇಂಟೆನೆನ್ಸ್, ರಸ್ತೆಗಳನ್ನು ಯಾವ ರೀತಿ ರಿಪೇರಿ ಮಾಡಬೇಕು ಎನ್ನುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅದು ಬಹಳ ಸೂಕ್ತವಾದುದು. ಸ್ಟೇಟ್ ಹೈವೇಸ್, ನ್ಯಾಷನಲ್ ಹೈವೇಸ್, other classified roads ಎಂದು ಮಾಡಬೇಕೆಂದಿರುವುದಾಗಿ ಹೇಳಿದ್ದಾರೆ. ಈ ಮಸೂದೆಯನ್ನು ತಯಾರಿಸತಕ್ಕ ಕಾಲದಲ್ಲಿ ಅದನ್ನೆಲ್ಲ ಮುಂದಿಟ್ಟುಕೊಂಡು ಸರ್ಕಾರ ಯೋಚನೆ ಮಾಡಬೇಕಾಗಿತ್ತು. ನ್ಯಾಷನಲ್ ಹೈವೇ ಮಾಡುವುದರಲ್ಲಿ ಎಷ್ಟು ದುಡ್ಡು ಖರ್ಚಾಗುತ್ತದೆ, ಎಂದು ನೋಡಿಕೊಂಡು ರಸ್ತೆಗಳ ಮೇಂಟೆನೆನ್ಸ್‌ಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಪ್ರತ್ಯೇಕ ಚೀಫ್ ಇಂಜಿನಿಯರನ್ನಿಟ್ಟು ಅವರ ಕೈಕೆಳಗೆ ಪ್ರತ್ಯೇಕ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಡಿವಿಷನ್ ಎಲ್ಲ ಇರಬೇಕು ಎಂದು ನಾನು ಈ ಸಂದರ್ಭದಲ್ಲಿ ತಮಗೆ ಮನವರಿಕೆ ಮಾಡಿಕೊಡುತ್ತೇನೆ. ಒಂದೊಂದು ಸೆಕ್ಷನ್ ಮಾಡಿರುವುದರಿಂದ ಅಷ್ಟು ಸುಲಭವಾಗಿ, ಸೂಕ್ತವಾಗಿ ಕೆಲಸ ಮಾಡಲು ಆಗುವುದಿಲ್ಲ. ಒಂದು ಊರಿನಲ್ಲಿ ಮಧ್ಯೆ ರೋಡ್ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಅದಕ್ಕೆ ಅಡ್ಡಿ ಬರುತ್ತದೆ. ಇಂಥ ಸಂದರ್ಭದಲ್ಲಿ ಅಧಿಕಾರ ಕೊಡುವುದು ಸರಿಯಾದುದು. ಇನ್ನು ಕೊನೆಯದಾಗಿ ಬೆಟರ್‌ಮೆಂಟ್ ಲೆವಿ ಬಗ್ಗೆ ಯೋಚನೆ ಮಾಡಬೇಕಾಗಿದೆ. 70 ಅಡಿ ಅಗಲ ಇರುವ ರಸ್ತೆ 150 ಅಡಿ ಅಗಲ ಮಾಡಿದರೆ ಬೆಟರ್‌ಮೆಂಟ್ ಲೆವಿಯಿಂದ ಜನಗಳಿಗೆ ಕಷ್ಟವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಸ್ಟೇಟ್ ಹೈವೇ ಮೂಲಕ ಬೆಟರ್‌ಮೆಂಟ್ ಲೆವಿ ಬೀಳುವುದಿಲ್ಲ. ಅರ್ಬನ್, ಮುನಿಸಿಪಲ್ ಲಿಮಿಟ್ಸ್ ಸುತ್ತುಮುತ್ತು ಇರತಕ್ಕ ಲ್ಯಾಂಡ್ಸ್ ಬಗ್ಗೆ ಅನ್ವಯಿಸುತ್ತದೆ. ಬೆಂಗಳೂರು ನಗರ ಬೆಳೆಯುತ್ತಿದೆ. ಲೂಪ್ ರೋಡ್ ಅಕ್ಕಪಕ್ಕದಲ್ಲಿ ಬಿಲ್ಡಿಂಗ್ಸ್ ಬರುತ್ತಿವೆ. ಅಲ್ಲಿಯ ಜಮೀನಿಗೆ ಬೆಲೆ ಬಂದಿದೆ. ಅಂಥಲ್ಲಿ ಬೆಟರ್‌ಮೆಂಟ್ ಲೆವಿ ಹಾಕಲಾಗುವುದು. ಹಳ್ಳಿಗಾಡಿನಲ್ಲಿ ಅದು ಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಇಷ್ಟು ವಿವರ ಹೇಳಿದ ಮೇಲೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಆದರೆ ಅರ್ಬನ್ ಏರಿಯಾದಲ್ಲಿ ಎಷ್ಟು ಡಿಸ್ಟೆನ್ಸ್‌ವರೆಗೆ ಬರುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ಅರ್ಬನ್ ಏರಿಯಾ ದಿನದಿನಕ್ಕೆ ಬೆಳೆಯುತ್ತಿದೆ. ಕಾನೂನು ಒಂದು ವರ್ಷದ ಸಲುವಾಗಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅಧಿಕಾರ ಪಡೆಯಬೇಕಾಗಿದೆ. ಒಂದು ವೇಳೆ ಏನಾದರೂ ಅನ್ಯಾಯವಾದರೆ ನ್ಯಾಯಾಲಯಕ್ಕೆ ಹೋಗಿ ಸರಿಪಡಿಸಿಕೊಳ್ಳಲು ಅವಕಾಶ ಇದೆ. ಕೋರ್ಟಿನಲ್ಲಿ ಅನ್ಯಾಯವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೆಚ್ಚಿಗೆ ಹೇಳುವುದಿಲ್ಲ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ ಮತ್ತು ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಮಸೂದೆಯಲ್ಲಿ ಲ್ಯಾಂಡ್ ಅಕ್ವಿಜಿಶನ್, ಬೆಟರ್‌ಮೆಂಟ್ ಲೆವಿ ವಿಚಾರ, ಬಾರ್ ಆಫ್ ಜ್ಯುರಿಸ್‌ಡಿಕ್ಷನ್ ಸೆಕ್ಷನ್ 69, ಇವು ಪ್ರಾಮುಖ್ಯವಾದ ಅಂಶಗಳು ಇವೆ. ಒಟ್ಟಿನಲ್ಲಿ ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ಕ್ಲಾಜಸ್ 15, 26, 32 ಇವುಗಳನ್ನು ಗಮನದಲ್ಲಿ ತೆಗೆದುಕೊಳ್ಳಬೇಕಾಗಿದೆ. ಈಗ ಕಾಲ ಬದಲಾವಣೆಯಾಗಿದೆ. ನಿಮ್ಮ ವಯಸ್ಸು ಇನ್ನೂ ಚಿಕ್ಕದು. ಇನ್ನೂ ವ್ಯಕ್ತಿತ್ವ ಬೆಳೆಸಿಕೊಂಡು ದೇಶಸೇವೆ ನೀವು ಮಾಡಬೇಕು ಎಂಬ ಒಳ್ಳೆಯ ದೃಷ್ಟಿಯಿಂದ ನಾನು ಮಾತನಾಡುತ್ತೇನೆ. ಈಗ ಏನಾಗಿದೆ ಅಂದರೆ, ದುಡ್ಡಿನ ಸುತ್ತಲೂ, ಸೂರ್ಯನ ಸುತ್ತಲೂ ಉಪಗ್ರಹಗಳು ತಿರುಗಿದ ಹಾಗೆ ಎಲ್ಲವೂ ತಿರುಗುತ್ತಿವೆ. ಲ್ಯಾಂಡ್ ಅಕ್ವೈರ್ ಮಾಡುವಾಗ್ಗೆ ಅಂಥ ಜಮೀನಿನ ಮೇಲೆ ಉಪಜೀವಿಸುವವನ ಉಪ ಜೀವನಕ್ಕೆ ಏನಾದರೂ ತೊಂದರೆಯಾಗುತ್ತದೆಯೋ ಎನ್ನುವುದನ್ನು ಮೊದಲು ಯೋಚನೆ ಮಾಡಬೇಕಾದುದು ಅಗತ್ಯ. ಜೀವನೋಪಾಯಕ್ಕೆ ಧಕ್ಕೆ ಬಾರದ ಹಾಗೆ ಕಾನೂನು ರಚನೆಯಾಗಬೇಕು. ಒಂದೆರಡು ಎಕರೆ ಮೇಲೆ ಜೀವನ ಮಾಡತಕ್ಕ ಜಾಗದಲ್ಲಿ ಹೈವೇ ಬಂದರೆ ಲ್ಯಾಂಡ್ ಅಕ್ವೈರ್ ಮಾಡುವ ಕಾಲದಲ್ಲಿ ಅಂಥವನಿಗೆ ಬೇರೆ ಕಡೆ ಜಮೀನು ಕೊಟ್ಟು ಅನುಕೂಲವಾಗುವ ಹಾಗೆ ಮಾಡಬೇಕು. ಆ ದೃಷ್ಟಿ ಇದ್ದರೆ ಮಾತ್ರ ಇದು ನಿಜವಾಗಿಯೂ ಸಮಾಜವಾದ ತತ್ವ ಅನುಸರಿಸಿಕೊಂಡು ಬಂದ ಹಾಗೆ ಆಗುವುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಲೆವಿ ಆಫ್ ಬೆಟರ್‌ಮೆಂಟ್ ಚಾರ್ಜಸ್ ವಿಚಾರದಲ್ಲಿ ಸೆಕ್ಷನ್ಸ್ 42, 43, 46 ಗಳಲ್ಲಿ ಹೇಳಲಾಗಿವೆ. ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಇದು ಎಷ್ಟು ದೂರದವರೆಗೆ ಅನ್ವಯಿಸುತ್ತದೆ ಎಂಬುದನ್ನು ಖಚಿತವಾಗಿ ರೂಲ್ಸ್ ಮಾಡಿಕೊಳ್ಳಬೇಕು. ಇದು ನಿರ್ದಿಷ್ಟವಾಗಿ ಇರಬೇಕು. ಯಾಕೆಂದರೆ ಕಾಲ

ಬದಲಾಗಿ ಆಡಳಿತ ಹದಗೆಟ್ಟಿದೆ. ಇನ್ನೊಂದು ಮುಖ್ಯ ವಿಷಯ ಅಂದರೆ, ಜಮೀನಿನ ಬೆಲೆ ಎಷ್ಟು ಎಂಬುದನ್ನು ನಿರ್ಧರಿಸುವವರು ಯಾರು ? ಶ್ರೀಮಂತರಿಗೆ ನಷ್ಟವಾಗುವುದಿಲ್ಲ. ಬಡವರಿಗೆ ಕಷ್ಟ ವಾಗುತ್ತದೆ. ಲ್ಯಾಂಡ್ ಅಕ್ವೈರ್ ಮಾಡುವಾಗ್ಗೆ ಬಡವನ ಜೀವನೋಪಾಯಕ್ಕೆ ಕೊಡಲಿ ಪೆಟ್ಟು ಬೀಳಬಾರದು. ದುಡ್ಡು ಇರುವವರು ಕೋರ್ಟು, ಕಚೇರಿಗೆ ಹೋಗುತ್ತಾರೆ. ಬಡವನು ನ್ಯಾಯ ದೊರಕಿಸಿಕೊಳ್ಳಲು ಕೋರ್ಟು, ಕಚೇರಿಗೆ ಹೋಗುವುದು ಸಾಧ್ಯವಾಗುವುದಿಲ್ಲ. ಎರಡು ಮೂರು ಎಕರೆ ಜಮೀನಿನ ಮೇಲೆ ಜೀವನಕ್ಕೆ ಅವಲಂಬಿಸಿಕೊಂಡಿರತಕ್ಕಂಥ ಬಡವನ ಜಮೀನಿನ ಮಧ್ಯೆ ಹೆದ್ದಾರಿ ಹಾಯ್ದು ಹೋದರೆ ಅವನು ಏನು ಮಾಡಬೇಕು ! ಸಮಾಜವಾದ ತತ್ವಕ್ಕೆ ಅನುಸಾರವಾಗಿ ಅವನಿಗೆ ಬೇರೆ ಮನೆ ಕಟ್ಟಿಸಿ ಕೊಡಬೇಕು, ಬೇರೆ ಜಮೀನು ಕೊಡಬೇಕು ಅಂದರೆ ಯಾವ ರೀತಿ ಫಜೀತಿ ಬರುವುದಿಲ್ಲ. ದುಡ್ಡು ಕೊಟ್ಟು ಜೀವನಾಧಾರವನ್ನು ಹಾಳುಮಾಡುವುದು ಸಾಧುವಲ್ಲ.

2-30 P.M.

ನೀವೇನು ಮಾಡುತ್ತೀರಿ ? 'ಕಾನೂನು ಅಂಶ ಇದೆ ಅದರ ಪ್ರಕಾರ ಇಷ್ಟು ದುಡ್ಡು ಅಂತ ಕೊಡುತ್ತೇವೆ, ಹೋಗಿ ಏನಾದರೂ ಮಾಡಿ' ಎಂದು ಹೇಳುತ್ತೀರಿ. ಇದರಿಂದ ನಿಜವಾಗಿಯೂ ಬಡ ವರಿಗೆ ಬಹಳ ಏಟು ಬೀಳುತ್ತದೆ. ಕ್ಲಾಜ್ 63 ರಲ್ಲಿ ವಿಲೇಜ್ ಹೆಡ್‌ಮನ್, ವಿಲೇಜ್ ಅಕೌಂಟೆಂಟ್ ಮತ್ತು ವಿಲೇಜ್ ವಾಚ್‌ಮನ್ ಇವರ ವಿಷಯವನ್ನು ಹೇಳುತ್ತಾ ಇದ್ದೀರಿ. ಈಗ ಈ ಮೂರು ಜನರೂಕೂಡ ಇಲ್ಲ, ಇವರನ್ನು ತೆಗೆದುಹಾಕಬೇಕೆಂದು ಪಂಚಾಯ್ತಿ ರಾಜ್ಯದ ರಿಪೋರ್ಟಿನಲ್ಲಿ ಬರು ತ್ತದೆ. ಆದ್ದರಿಂದ ಈ ರಸ್ತೆಗಳ ಮೇಲುಸ್ತುವಾರಿಯನ್ನು ಲೋಕಲ್ ಬಾಡೀಸ್‌ಗೆ ವಹಿಸಿದರೆ ಅವರು ಇದನ್ನು ನೋಡಿಕೊಳ್ಳುತ್ತಾರೆ—ಏಕೆಂದರೆ ಒಬ್ಬ ಮನುಷ್ಯನಿಗೆ ತನ್ನದು ಎಂಬ ಭಾವನೆ ಬರಬೇಕಾದರೆ ಆತನೇ ಅದನ್ನು ಸ್ವತಃ ಮಾಡಿರಬೇಕು—ಆರೀತಿ ಅವರೇ ಮಾಡಿಕೊಂಡಿದ್ದೇ ಆದರೆ ಅವರು ರಿಪೋರ್ಟು ಕೊಡುತ್ತಾರೆ. ಇಲ್ಲದೇ ಹೋದಪಕ್ಷದಲ್ಲಿ ಈಗಿರುವಂತೆ ಇದು ಒಂದು ಚಲಾಯಿಸ ಲಾರದ ಕಾನೂನು ಆಗುತ್ತದೆ. ಆ ದೃಷ್ಟಿಯಿಂದ ಅದನ್ನು ಇನ್ನೂ ಸ್ವಲ್ಪ ದಿವಸ ತಡೆಹಿಡಿದು, ಲೋಕಲ್ ಬಾಡೀಸಿಗೂ ಅಷ್ಟು ಹಣ ಇರುವುದರಿಂದ ಪಿ.ಡಬ್ಲ್ಯೂ.ಡಿ. ಹಣದ ಜೊತೆಗೆ ಅದನ್ನೂ ಸೇರಿಸಿ, ಕೊನೇಪಕ್ಷ ಮೂರರಷ್ಟಾದರೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಇತರ ಕಾನೂನುಗಳಿಗೆ ಇದು ವ್ಯತಿರಿಕ್ತ. reference clause (ಇನ್‌ಕನ್ಸಿಸ್ಟೆಂಟ್) ವಾಗಿರು ತ್ತದೆ ಎಂದು ಹೇಳಿರುತ್ತೀರಿ. ಏಕೆಂದರೆ, ಅವುಗಳಲ್ಲಿ ಈಗಿನ ಕಾಲಕ್ಕೆ ಹೊಂದಾಣಿಕೆ ಇಲ್ಲದ ಅಂಶ ಗಳಿವೆ ಎಂದಿದ್ದಾರೆ. ಅವುಗಳನ್ನು ತೆಗೆದು ನೋಡಿದರೆ ಆ ಕ್ಲಾಜ್‌ನಲ್ಲಿರುವುದೇ ಚಾಚೂ ಬಿಡದೆ ಇದರಲ್ಲೂ ಇದೆ ಎಂದು ನನಗೆ ಅನಿಸುತ್ತದೆ, ಹೊಸ ಅಂಶ ಏನಿದೆ ಎಂಬುದನ್ನು ಹೇಳಿದರೆ ಆ ವಿಷಯ ವನ್ನು ತಿಳಿದುಕೊಂಡಹಾಗಾಗುತ್ತದೆ ಎಂದು ನಾನು ಹೇಳುತ್ತೇನೆ. ಇದರಲ್ಲಿ ಇನ್‌ಕನ್ಸಿಸ್ಟೆಂಟ್ ಯಾವುದು ಕಾಣುವುದು ಎಂದರೆ ಮನುಷ್ಯನ ಜೀವನಕ್ಕಿಂತಲೂ ದುಡ್ಡಿಗೆ ಪ್ರಾಮುಖ್ಯತೆ ಜೊತೆಗೆ ಈ ವಿಲೇಜ್ ಹೆಡ್‌ಮನ್, ವಿಲೇಜ್ ಅಕೌಂಟೆಂಟ್, ವಿಲೇಜ್ ವಾಚ್‌ಮನ್ ಅಂತ ಹೇಳಿರುವುದು. ರಸ್ತೆ ಯನ್ನು ಅದರ ಹತ್ತಿರಿರುವ ಜನವೇ ಮಾಡಿದ್ದರೆ ಇದನ್ನು ಯಾರಿಗೂ ಹೇಳಬೇಕಾಗಿರಲಿಲ್ಲ. ಏಕೆಂದರೆ ಮನೆಗೆ ಬೆಂಕಿ ಬಿತ್ತು ಎಂದರೆ ತಾನೇ ತಾನಾಗಿ ಹೋಗಿ ದೂರು ಕೊಡುತ್ತಾನೆ, ಬೆಂಕಿ ಆರಿಸುತ್ತಾನೆ. ಆದ್ದರಿಂದ ಹಳ್ಳಿಗಳಲ್ಲಿ ರಸ್ತೆಗಳನ್ನು ಜನತೆ ಕಾರ್ಯ, ಉಸ್ತುವಾರಿಯಲ್ಲಿ ನಡೆದುಕೊಂಡು ಹೋಗುವ ರೀತಿ ನಡೆದುಕೊಂಡು ಹೋಗುವಂತಹ ಏರ್ಪಾಡು ಮಾಡಿದರೆ ಒಳ್ಳೆಯದು.

ಇನ್ನು ಕಾಂಪೆನ್‌ಸೇಷನ್ ವಿಚಾರ: ಎಷ್ಟೋಸಾರಿ ರಸ್ತೆಗಳು, ತಮಗೆಲ್ಲರಿಗೂ ಗೊತ್ತಿರುವ ವಿಚಾರ, ಅನೇಕರಿಗೆ ಒಂದು, ಎರಡು, ಮೂರು ಎಕರೆ ಜಮೀನು ಇರುತ್ತದೆ. ಮಧ್ಯೆ ರಸ್ತೆ ಬಂದರೆ ದೇವರೇ ಗತಿ! ಅವನು ಏನು ಮಾಡಬೇಕು ? ಆದ್ದರಿಂದ ಈ ಕಾಂಪೆನ್‌ಸೇಷನ್ ಕ್ಲಾಜನ್ನು ಪುನರ್ವಿಮರ್ಶೆ ಮಾಡಬೇಕು, ಆ ರೀತಿ ಮಾಡಿದ್ದೇ ಆದರೆ ತಮಗೆ ಬಹಳ ಹಣ ಉಳಿಯುತ್ತದೆ. ಬೇರೆಕಡೆ ಆತನಿಗೆ ಸರ್ಕಾರದ ಮುಫತ್ ಜಮೀನು ಮತ್ತು ಮನೆ ಕೊಡಿ. ಇಲ್ಲದೇ ಇದ್ದರೆ ಸುಮ್ಮನೆ ಒಂದು ಕಡೆ ಖರ್ಚು ಆಗುತ್ತದೆ ಮತ್ತು ಇನ್ನೊಂದುಕಡೆ ಒಬ್ಬ ಮನುಷ್ಯನ ಜೀವನೋಪಾಯಕ್ಕೆ ಆತಂಕವನ್ನುಂಟುಮಾಡಿದ ಹಾಗಾಗುತ್ತದೆ.

ಜಮೀನುಗಳಿಗೆ ಬೆಟರ್‌ಮೆಂಟ್ ಲೆವಿ ಹಾಕುತ್ತೇವೆ ಎಂದು ಹೇಳುತ್ತೀರಿ; ಅರ್ಧ ಅಥವಾ ಒಂದು ಎಕರೆಯಲ್ಲಿ 8-10 ಮನೆಗಳನ್ನು ಕಟ್ಟಬಹುದು, ಅಷ್ಟು ಜಮೀನು ಇರುತ್ತದೆ, ಬೆಟರ್ ಮೆಂಟ್ ಲೆವೀ ಹಾಕಿದರೆ ಖಂಡಿತವಾಗಿಯೂ ದುಡ್ಡು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಹೈವೇ ಬಂತು ಎಂದರೆ, ಅದರಿಂದ ಅಲ್ಲೆಲ್ಲಾ ಸಾಲು ಮರಗಳಲ್ಲಿ ಕೋತಿಗಳ ಕಾಟ ಜಾಸ್ತಿಯಾಗುತ್ತದೆ. ಅದರಿಂದ ಸಾಮಾನ್ಯವಾಗಿ ಆ ಜಮೀನನ್ನು ಅವನು ಬಂಜರು ಬಿಡುತ್ತಾನೆ. ಆ ದೃಷ್ಟಿಯಿಂದ ನಾನು

(ಶ್ರೀ ವಿ. ಎಂ. ದೇವ್)

ಹೇಳುವುದೇನೆಂದರೆ, ಬೆಟರ್‌ಮೆಂಟ್ ಲೆವಿ ಹಾಕುವಾಗ ಒಂದು ಮನೆ ಕಟ್ಟಿಕೊಳ್ಳುವಷ್ಟು ಸೈಟಿನ ಜಾಗ ಅವನಿಗೆ ಬಿಟ್ಟೇ ಬಿಡಬೇಕು ಇದು ಒಂದನೆಯದು, ಎರಡನೆಯದು ಅವನ ಜೀವನೋಪಾಯಕ್ಕೆ ಅದರಲ್ಲೂ ವ್ಯವಸಾಯದಲ್ಲಿ ಜೀವನೋಪಾಯ ಮಾಡುತ್ತಾ ಇದ್ದರೆ ಅದಕ್ಕೆ ಬೇರೆಕಡೆ ಅಷ್ಟೇ ಜಮೀನನ್ನು ಒದಗಿಸಿ ಒಕ್ಕಲಿರುವುದಕ್ಕೆ ಮನೆ ಕಟ್ಟಿಕೊಟ್ಟು ಆಮೇಲೆ ಅವನ ಜಮೀನನ್ನು ವಶಪಡಿಸಿಕೊಂಡು ತಮ್ಮ ರಸ್ತೆ ಮುಂತಾದುವುಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಬೆಳೆ ಇಟ್ಟಿರುವ ಜಾಗಕ್ಕೆ ಎಷ್ಟು ಕಾಂಪೆನ್‌ಸೇಷನ್ ಕೊಡಬೇಕೆಂಬ ವಿಚಾರ ಬರುತ್ತದೆ. ಬೆಳೆಯನ್ನು ಕತ್ತರಿಸಿದಾಗ ರಾಗಿ ಬೆಳೆದಿರಬಹುದು, ಭತ್ತ ಬೆಳೆದಿರಬಹುದು ಅದಕ್ಕೆ ಕಾಂಪೆನ್‌ಸೇಷನ್ ಕೊಟ್ಟು ಆ ಜಮೀನನ್ನು ವಶಪಡಿಸಿಕೊಳ್ಳಬೇಕು—ಆ ರೀತಿ ಕೊಡದೇ ವಶಪಡಿಸಿಕೊಳ್ಳುವುದು ಒಳ್ಳೆಯದಲ್ಲ. ಅದರಲ್ಲಿ ಬರುವುದು ಒಂದೇ ಫಸಲು ಅಲ್ಲ, ವರ್ಷೇ ವರ್ಷೇ ಫಸಲು ಬರುತ್ತಾ ಇರುತ್ತದೆ. ಆದ್ದರಿಂದ ಈ ಅಂಶಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ಅಧಿವೇಶನ ಆದಮೇಲೆ ಇನ್ನೊಂದು ಅಧಿವೇಶನ ಬರುವ ಕಾಲಕ್ಕೆ ಈ ವಿಚಾರವನ್ನು ಕೂಲಂಕಷವಾಗಿ ಯೋಚನೆ ಮಾಡುವುದು ಒಳ್ಳೆಯದು. ಏಕೆಂದರೆ ಅಷ್ಟು ಹೊತ್ತಿಗೆ ಪಂಚಾಯ್ತಿ ರಾಜ್ಯದ ಬಿಲ್ಲನ್ನೂ ಸಹ ಚರ್ಚೆಮಾಡಿರುತ್ತೇವೆ, ಅದರಲ್ಲಿ ಇಂಪ್ಲಿಮೆಂಟ್ ಮಾಡಬೇಕಾದ್ದು ಬಹಳ ಇದೆ, ಅದರ ಬೆಳಕಿನಲ್ಲಿ ಈ ಒಂದು ಕಾನೂನನ್ನು ಮಾಡುವುದು ಒಳ್ಳೆಯದು ಎಂಬುದು ತಮಗೇ ಗೊತ್ತಾಗುತ್ತದೆ ಮತ್ತು ಇದರಲ್ಲಿ ನ್ಯೂನತೆಗಳು ಇವೆ ಎಂಬುದೂಕೂಡ ತಮಗೆ ಗೊತ್ತಿದೆ. ಆದ್ದರಿಂದ ಮುಂದಿನ ಅಧಿವೇಶನದ ಹೊತ್ತಿಗೆ ಸೂಕ್ತವಾದ ಬದಲಾವಣೆಗಳನ್ನು ಮಾಡಿ ಈ ಬಿಲ್ಲನ್ನು ತೆಗೆದುಕೊಂಡು ಬರಬೇಕೆಂದೇ ಹೇಳಿ ನಾಲ್ಕು ಮಾತುಗಳನ್ನು ಆಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಈಗ ನಮ್ಮ ಮುಂದೆ ಈ ಹೈವೇಸ್ ಬಿಲ್ಲನ್ನು ತಂದಿರುವುದಕ್ಕಾಗಿ ಸಂತೋಷಪಡುತ್ತೇನೆ. ನಾನೀಗ ಹೆಚ್ಚಾಗಿ ಕ್ಲಾಜ್ ಬೈ ಕ್ಲಾಜ್ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನನಗೆ ತೋಚಿದ ನಾಲ್ಕಾರು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಸರ್ಕಾರದವರು 5ನೇ ಛಾಪ್ಟರಿನಲ್ಲಿ ಐದು ವಿಧವಾದ ರಸ್ತೆಗಳನ್ನು ಹೇಳಿದ್ದಾರೆ. ಆದರೆ ಆಗಲೇ ಮಾತನಾಡಿದ ಶ್ರೀ ದೇವೇ ಗೌಡರು ಈ ರಸ್ತೆಗಳ ಅಗಲ ಎಷ್ಟಿರಬೇಕು ಎಂಬುದನ್ನು ಇಲ್ಲಿ ಹೇಳಿಲ್ಲ ಎಂದು ಹೇಳಿದರು. ಆದರೆ ನನಗೆ ತೋಚಿದ ಮಟ್ಟಿಗೆ ಈ ಹೈವೇಸ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ, ತಾಲ್ಲೂಕ್ ಬೋರ್ಡ್ ರಸ್ತೆ ಇವುಗಳನ್ನು ಮಾಡುವ ಕಾಲಕ್ಕೆ ಈ ಸಣ್ಣ ಹಳ್ಳಿ ರಸ್ತೆಗಳನ್ನು ಬಿಟ್ಟು ಉಳಿದ ಈ ಎಲ್ಲಾ ರಸ್ತೆಗಳ ಅಗಲವೂ ಕೂಡ 64 ಅಡಿ ಇರಲೇಬೇಕೆಂದು ಕಡ್ಡಾಯ ಮಾಡುತ್ತಿದ್ದ ನಿದರ್ಶನಗಳು ನನ್ನ ಗಮನದಲ್ಲಿವೆ. ಈಗ ನಮ್ಮ ತಾಲ್ಲೂಕಿನಲ್ಲಿ ಸುಮಾರ 200 ಮೈಲಿವರೆಗೆ ಐ.ವಿ.ಸಿ. ರಸ್ತೆ ಮಾಡಿದ್ದಾರೆ. ಈ ರಸ್ತೆಗೆ ಬೇಕಾದ ಭೂಮಿಯನ್ನು ಜನಗಳೇ ತಾವಾಗಿ ಮುಂದೆ ಬಂದು ಹುಮ್ಮಸ್ಸಿನಿಂದ ಬಿಟ್ಟುಕೊಟ್ಟಿದ್ದಾರೆ. ಇಲ್ಲಿ ಯಾವ ಅಕ್ವಿಜಿಷನ್ ಪ್ರಶ್ನೆಯೂ ಬರಲಿಲ್ಲ. ಅವರು ಯಾವ ಒಂದು ಕಾಂಪೆನ್‌ಸೇಷನ್ ಕೂಡ ಕೇಳಿಲ್ಲ. ಇಂಥಾ ಸಂದರ್ಭಗಳೆಲ್ಲೆಲ್ಲಿವೆ ಅಲ್ಲಿ ಮಾತ್ರ ಈ ರಸ್ತೆಗಳು 30 ಅಡಿ ಅಗಲ ಇದ್ದರೆ ಸಾಕೆಂದು ಹೇಳುತ್ತೇನೆ. ಅದಕ್ಕಿಂತ ಜಾಸ್ತಿ ಇರುವುದು ಬೇಡ. ಒಂದುವೇಳೆ ಈಗಾಗಲೇ ಯಾರಾದರೂ ಆ ಬೌಂಡ್ರಿ ಮಾರ್ಕ್ ಅಥವಾ ಕಾಲ್ವೆ ಇತ್ಯಾದಿಗಳನ್ನು ತೋಡಿದ್ದರೆ ಅದನ್ನು 30 ಅಡಿಗೆ ಕ್ಲುಪ್ತ ಮಾಡಿಸಬೇಕೆಂದು ನಾನೀಗ ಸಲಹೆ ಮಾಡುತ್ತೇನೆ. ಇನ್ನು ಡಿಸ್ಟ್ರಿಕ್ಟ್ ಬೋರ್ಡ್, ಸ್ಟೇಟ್ ಹೈವೇಸ್‌ಗಳೇನಿವೆ ಇವುಗಳ ಅಗಲ ಇದರ ಎರಡರಷ್ಟು ಅಂದರೆ 60 ಅಡಿ ಇದ್ದರೆ ಸಾಕೆಂದು ಹೇಳುತ್ತೇನೆ. ಇನ್ನುಳಿದ ರಸ್ತೆಗಳ ಅಗಲ ಎಷ್ಟಿರಬೇಕು ಎಂಬ ವಿಚಾರ ಇಂಜಿನಿಯರುಗಳಿಗೆ ಬಿಟ್ಟುಬಿಡೋಣ. ಆದರೆ ಈಗ ಈ ರಸ್ತೆಗಳ ವಿಚಾರ ಬಹಳ ಶೋಚನೀಯ ಸ್ಥಿತಿಯಲ್ಲಿದೆ. ಕೆಲವುಕಡೆ ಪಟ್ಟಣದ ಪಕ್ಕದಲ್ಲಿ ಹೋಗತಕ್ಕ ರಸ್ತೆಗಳ ಅಗಲ ಕೇವಲ 18-20 ಅಡಿ ಇದ್ದು ಅದರ ಉದ್ದಕ್ಕೂ ತಿಪ್ಪೆ ಗುಂಡಿಗಳಿರುತ್ತವೆ. ಈ ವಿಚಾರ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಮತ್ತು ಮಾನ್ಯ ಮಂತ್ರಿಗಳಿಗೂ ಗೊತ್ತಿರತಕ್ಕದ್ದೇ ಆಗಿದೆ. ವಾಹನಗಳ ಓಡಾಟ ಜಾಸ್ತಿ ಇರುವ ಕಡೆ ಆಕ್ಸಿಡೆಂಟುಗಳು ಜಾಸ್ತಿ ಆಗುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಈಗ ರಸ್ತೆಗಾಗಿ ಗೊತ್ತು ಮಾಡಿರುವ ಪ್ರದೇಶ ಯಾವುದಿದೆ ಅದನ್ನು ಯಾರೇ ಆಗಲೀ ಯಾವ ವಿಧದಿಂದಲೂ ಆಕ್ರಮಿಸಿಕೊಳ್ಳುವುದಕ್ಕೆ ಅವಕಾಶವಿರಬಾರದು. ಆ ರೀತಿಯ ನಿಯಮಗಳನ್ನು ಈ ಮಸೂದೆಯಲ್ಲಿ ಅಡಕಮಾಡಬೇಕೆಂದು ಹೇಳುತ್ತೇನೆ. ಹಾಗೆ ಅಡಕಮಾಡಿದ ನಂತರ ಯಾರು ಇದನ್ನು ಉಲ್ಲಂಘನೆ ಮಾಡುತ್ತಾರೆ ಅಂಥವರಿಗೆ ಪ್ರಬಲವಾದ ಶಿಕ್ಷೆ ಸಹಾ ಕೊಡುವಂತೆ ಇದರಲ್ಲಿ ಅಳವಡಿಸಬೇಕೆಂದು ಹೇಳುತ್ತೇನೆ.

ಇನ್ನು ರಸ್ತೆ ಮರಗಳ ವಿಚಾರಕ್ಕೆ ಬಂದರೆ ಯಾರೊಬ್ಬರೂ ಇದನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಕೆಲವು ಕಾಲ ರೆವಿನ್ಯೂ ಇಲಾಖೆಯವರೂ, ಇನ್ನು ಕೆಲವು ಕಾಲ ಪಿ.ಡಬ್ಲ್ಯು.ಡಿ. ಅವರೂ ನೋಡಿಕೊಳ್ಳುತ್ತಿರುವುದರಿಂದ ಅವು ಪ್ರತಿನಿತ್ಯವೂ ಸಿಕ್ಕಾಬಟ್ಟೆ ನಾಶವಾಗುತ್ತಿರುವುದನ್ನು ನಾವೆಲ್ಲರೂ ನೋಡುತ್ತಿರುತ್ತೇವೆ. ಆದುದರಿಂದ ಇನ್ನುಮುಂದೆ ಈ ಸಾಲುಮರಗಳನ್ನು ಫಾರೆಸ್ಟ್ ಇಲಾಖೆಯವರಿಂದ ಹಾಕಿಸತಕ್ಕ ಪದ್ಧತಿಯನ್ನು ಜಾರಿಗೆ ತರುವುದೊಳ್ಳೆಯದೆಂದು ಸಲಹೆ ಮಾಡುತ್ತೇನೆ. ಹೀಗೆ ಹೇಳುವಾಗ ಆ ಇಲಾಖೆಯವರು ಗಿಡಗಳನ್ನು ನಡತಕ್ಕ ಕಾಲದಲ್ಲಿ ಫಲ ಕೊಡತಕ್ಕ ಹಾಗೂ ವರಮಾನ ಬರತಕ್ಕ ಮತ್ತು ಬೇಗ ಬೆಳೆಯತಕ್ಕಂಥ ಮರಗಳನ್ನು ರಸ್ತೆಯ ಎರಡು ಪಕ್ಕಗಳಲ್ಲೂ ಹಾಕತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲವೇ ನಮ್ಮಲ್ಲಿ ಈ ಹಿಂದೆ ಇದ್ದಂಥ ಹಳೇ ಪದ್ಧತಿಯನ್ನು ಅನುಸರಿಸಿ, ರಸ್ತೆಯ ಪಕ್ಕದಲ್ಲಿರತಕ್ಕ ರೈತನು ಆ ರಸ್ತೆ ಪಕ್ಕದಲ್ಲಿ ಮರಗಳನ್ನು ಬೆಳೆಸುವುದಕ್ಕೂ ಮತ್ತು ಹಾಗೆ ತಾನು ಬೆಳೆಸಿದ ಮರಗಳ ಫಲವನ್ನು ಆತನೇ ತೆಗೆದುಕೊಳ್ಳುವಂತೆಯೂ, ಆ ಮರವು ಬಿದ್ದು ಹೋದನಂತ ಅದನ್ನು ಆತನೇ ತೆಗೆದುಕೊಂಡು ಮತ್ತೆ ಅಲ್ಲಿ ಹೊಸದಾಗಿ ಮರ ಬೆಳೆಸತಕ್ಕ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ಈಗ ಎಲ್ಲೆಲ್ಲಿ ಹೈವೇಸ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಮಾಡುತ್ತಿದ್ದಾರೆ. ಅಲ್ಲೆಲ್ಲಾ ಮರಗಳನ್ನು ಕಡಿಯುತ್ತಿದ್ದಾರೆ. ಅಲ್ಲಿ ಈಗಲೇ ಮರಗಳನ್ನು ಹಾಕುವುದಕ್ಕೆ ಪ್ರಯತ್ನಮಾಡಬೇಕು. ಇನ್ನು ಈ ಆಕ್ಟ್ ಜಾರಿಗೆ ಬಂದಮೇಲೆ, ಇದು ಜಾರಿಗೆ ಬರುವ ಮುನ್ನ ರಸ್ತೆ ಅಕ್ಕಪಕ್ಕದಲ್ಲಿ ಕಟ್ಟಿಕೊಂಡಿದ್ದ ಮನೆಗಳಿಗೆ ಏನು ಮಾಡುವುದಕ್ಕೂ ಆಗುವುದಿಲ್ಲ. ಇನ್ನು ಯಾರ್ಯಾರು ಅಕ್ಕಪಕ್ಕದಲ್ಲಿ ಭೂಮಿ ಕಳೆದುಕೊಂಡಿದ್ದಾರೋ ಅಂಥವರಿಗೆ ಕೂಡಲೇ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ಆದರೆ ಈ ಪರಿಹಾರ ದ್ರವ್ಯ ಆ ಭೂಮಿಯ ಸಾರದ ಮೇಲೆ ಹೋಗುತ್ತದೆ. ಹೀಗೆ ಕೆಲವು ಪಟ್ಟಣಗಳಿರುವ ಕಡೆಯೂ ರಸ್ತೆ ಇಕ್ಕಟ್ಟಾಗಿದ್ದು ಅಲ್ಲಿಯೂ ಅನಾಹುತಗಳಾಗುತ್ತಿವೆ. ಈಗ ಸರ್ಕಾರದವರು ರಸ್ತೆಗಳನ್ನು ಅಲ್ಲಲ್ಲೇ ಡೀವಿಯೇಟ್ ಮಾಡುತ್ತಿದ್ದಾರೆ. ರಸ್ತೆಗಳು ಸಾಧ್ಯವಾದ ಮಟ್ಟಿಗೂ ನೇರವಾಗಿ ಹೋಗುವಂತೆ ಮಾಡಬೇಕೆಂಬುದೇ ಅದರ ಉದ್ದೇಶ. ಆದರೆ ಇದರ ಬಗ್ಗೆ ನಾನು ಹೇಳುವುದಿಷ್ಟೇ: ಬೆಂಗಳೂರು, ಮೈಸೂರು ಮತ್ತು ಬೆಳಗಾಂ ಇಂಥಾ ದೊಡ್ಡ ದೊಡ್ಡ ಪಟ್ಟಣಗಳು ಇರುವ ಕಡೆ ಜಮೀನನ್ನು ಮಾರಿ ಲಾಭ ಗಳಿಸತಕ್ಕಂಥ ಜನರಿದ್ದಾರೆ. ಇಂಥಾ ಕಡೆ ಬೇಕಾದರೆ ಈ ಬೆಟರ್‌ಮೆಂಟ್ ಲೆವಿಯನ್ನು ಹಾಕಿ ಇನ್ನು ಈ ಸಣ್ಣಪುಟ್ಟ ಪಂಚಾಯಿತಿಗಳಿಗೆ ಇದನ್ನು ಅನ್ವಯಿಸಬಾರದೆಂದು ಹೇಳುತ್ತೇನೆ.

ಇನ್ನು ಈಗಾಗಲೇ ರಚಿಸಲಾಗಿರತಕ್ಕ ಆರ್.ಸಿ. ರೋಡುಗಳೇನಿವೆ ಅವುಗಳಬಗ್ಗೆ ಕೆಲವುಕಡೆ ಆ ರಸ್ತೆ ಅಗಲದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಆದಾಗ್ಯೂ ಪರಿಹಾರ ಕೊಡದೆ ಭೂಮಿಯನ್ನು ಕೊಟ್ಟಿರತಕ್ಕ ಜನರು ಇರುವ ಕಡೆ ರಸ್ತೆಯ ಅಗಲವನ್ನು ಕಡಮೆ ಇದ್ದರೂ ಅಷ್ಟಕ್ಕೇ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ರಸ್ತೆಯನ್ನು ಎನ್‌ಕ್ರೋಚ್ ಮಾಡತಕ್ಕ ಜನರ ಬಗ್ಗೆ ಕ್ರೂರವಾದ ಕ್ರಮ ಕೈಗೊಳ್ಳಲು ಸೂಕ್ತ ಕಾನೂನನ್ನು ರಚಿಸಬೇಕೆಂದು ಹೇಳುತ್ತೇನೆ. ಇಷ್ಟನ್ನು ಹೇಳಿ ಮುಂದೆ ಈ ಆಕ್ಟ್ ಜಾರಿಗೆ ಬಂದಮೇಲೆ ಈ ಬಗ್ಗೆ ಒಂದು ರೂಲ್ಸನ್ನು ಫ್ರೇಂ ಮಾಡುವ ಅಗತ್ಯವಿರುವುದರಿಂದ ಉಳಿದ ವಿಚಾರವನ್ನು ಆಗ ಮಾತನಾಡಬಹುದೆಂದು ಭಾವಿಸಿ, ಈಗ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri G. V. GOWDA** (Palya).—Mr. Speaker, Sir, the principles adumbrated in this Bill are welcome and, in my opinion, this is one of the good pieces of legislation that has to be kept in the Statute Book. It is said that in the old Mysore area, there was an Act called the Mysore Highways Act and because no rules have been framed since 1920, that particular Act has not been given effect to and the benefits that the Act could have conferred are not available there.

[MR. DEPUTY SPEAKER in the Chair.]

So far as the Bombay Highways Act of 1955 is concerned, it has been given effect to and I do not know to what extent it has conferred benefits in Bombay area. In the absence of similar legislations in Madras, Hyderabad and Coorg areas, practically I should say that no advantage or benefit could be derived in this regard. As you are aware, Sir,

(SRI G. V. GOWDA)

especially in rural parts along the highways, including some parts of highways, there have been encroachments and people are still in the habit of encroaching, temporary constructions are being put up and so many other things which are detriment to the interests are being committed. In order to avoid these malpractices, if I may be permitted to say, it is a welcome piece of legislation. In the absence of this kind of an enactment, it has become impossible for the authorities to avoid this ribbon development and it has become impossible for the preservation of highways in a manner that is conducive in a welfare State. It has become impossible even to remove any encroachment in respect of construction, maintenance and development of highways as such. So, such being the case, nobody should deny that this is a very good piece of legislation and it has to be implemented with all the enthusiasm to see that the intention that is adumbrated in this piece of legislation is translated into action. I may not be having any experience so far as other areas of our State are concerned. In my own area, a road which has been a highway that is managed and controlled by the P.W.D. from Moogur to Kollegal, has been encroached upon with the result that only 10 ft. width is left and it has become impossible for even the traffic to have easy transportation, and especially people, who are influencial, go to the extent of neglecting the public interest at large and take advantage by encroaching upon the road to facilitate to have their own ends achieved. There are instances where the roads have become narrow and it is dangerous and at any time it is likely that some calamity may happen. In order to see that such things will not happen and all encroachment would be removed, it is desirable to see that this Act is implemented very soon.

So far as the highway is concerned, it has been defined as road, way or land, in clause 3, and it is categorised into five ways. I do not know whether this highway which has been defined as such under clause 3 is to be controlled and managed by the Govrnment Public Works Department or not. The Hon'ble Minister in charge of the Bill has not made it specific whether all the roads that are declared to be highways have got to be managed and controlled by the Government. A distinction is sought to be made between a highway (special) and a State highway. When it is declared to be a State highway, naturally the highway roads have got to be given the same sort of facility and in my opinion no sort of distinction could be made in respect of State highways. Why should we call a certain road as a State highway (special) and a certain road as a State highway ? So, in order to attract uniform attention at the hands of the Government, it is better to have one State highway without any distinction as 'special' or 'ordinary.' Supposing the road from Bangalore to Mysore and Ooty is treated as an ordinary highway and the road from Bangalore to Davangere is treated as Highway (special), that may lead to some complication. The State highway means that there should be no distinction between one road and another

and it merits equal attention, equal performance at the hands of the Government. It is also stated as 'a major district road' and 'other district road.' Usually a road from a Taluk headquarters to a District headquarters, is called a District road. Even in such cases, there need not be any distinction between a major district road and a district road. Even that distinction should be removed. And, there is what is called a village road. If it is the intention of the Government to take all these roads as highways, to its control and management, it is very good and it will improve the conditions of roads to a substantial extent and thereby we must compliment the Government for taking up all these categories of roads to their control and management.

So far as power to highway authorities is concerned, no doubt, it may be necessary under certain circumstances. These powers should not be exercised by the highway authorities when it is detrimental to the interest of the State and that has got to be kept in mind while framing the rules. Necessary rules have got to be framed to see that there is some sort of check over the authority, who exercises these powers. Clause 21—Prevention of unauthorised occupation of highway - contemplates permission being given for any person, to place a temporary encroachment on any highway, etc., to put up a temporary tent, pandal, to deposit or cause to deposit building materials, to make a temporary excavation for carrying out any repairs or improvements, provided that no such permission shall be deemed to be valid beyond the period of one year. So, permission can be given to any person to do these acts along a highway for a period of one year. While giving that permission, it is said that permission will be given under rules as may be prescribed by the State Government and on payment of such rent and other charges as may be prescribed.

As a matter of fact, normally we should not allow such a thing to happen. In case it becomes indispensable to help a person, permission may be granted. Supposing a person is constructing a building near the highway and he wants to have materials collected alongside of the highway. In such circumstances, permission can be granted. Not to allow a person to instal temporary shop and hotel is a good thing. But when it becomes impracticable and it is not condusive for the maintenance and upkeep of the highway, when it becomes absolutely necessary, then only such permission may be given. According to clause 21, permission would be given by the High Way Authority.

3-00 P.M.

Sri VEERENDRA PATIL.—One year is the maximum period. It is left to the discretion of the Highway authority. It cannot be more than one year. It can be less.

Sri G. V. GOWDA.—My submission is no permission should be given as a matter of rule. It is only in exceptional cases.

Sri VEERENDRA PATIL.—That is why we make this provision. It is only a permissive provision. There is also clause 22, under which he can cancel such a permission issued if it is going to prove detrimental to the up-keep of the Highway.

Sri G. V. GOWDA.—So far as cancellation of permission is concerned Sir, it says:

> "(d) if the land on which such encroachment has been made is required for any public purpose or such encroachment is causing impediment or danger to traffic."

While giving permission, I presume that the Highway authority would have considered whether by giving such permission it would entail any encroachment or whether it would not affect any public purpose, or whether it would not cause an impediment or danger to traffic. He would have considered these aspects. When he has considered these aspects and come to the conclusion that this would happen, naturally he would not give permission. Therefore, the circumstance contemplated in (d) will not arise at all. Such being the case, I do not understand why this provision is retained.

Sri VEERENDRA PATIL.—What should happen if such a situation arises, after permission is given? Should there be no provision like that?

Mr. DEPUTY SPEAKER—This may happen in very rare cases.

Sri G. V. GOWDA.—Then I come to clause 23—prevention of encroachment. It is said that persons who encroach unauthorisedly, they have got to be evicted summarily. This is welcome. But sub-clause (2) provides for prosecution of the person concerned in addition to summary eviction. Supposing a person has already encroached and the Highway authority has given him notice and is evicted summarily. In my opinion, no prosecution need be taken against such persons. If he does not comply with the direction of the Highway authority, then only prosecution need be launched, not otherwise. Besides, there is already provision for prosecution in previous clauses. I therefore feel that this provision need not stand but may be deleted.

Then Sir, clause 26, says 'doing minimum damage in certain cases and compensation'. This envisages doing little damage by these officers. I do not know how this term LITTLE can be described or defined. I am of opinion that practically no damage should be done by any officer. He must be prudent and careful to see that no damage is done while entering upon the property or the land or when he does something in the interest of the Government.

Sri VEERENDRA PATIL.—If damage becomes unavoidable? That is why we say that minimum damage. Why should any officer do serious damage unless he has an ulterior motive?

Sri G. V. GOWDA.—Things are expected to be done in good faith. Why a specific provision? We cannot rule out the possibility that some officers may have even ulterior motive. If there is a provision permitting an officer to do a little damage, then it is likely to be abused. That is my apprehension.

Then I come to clause 28 (2) which deals with the amount of compensation for land acquired. What I say is, we have a Land Acquisition Act, which provides for all matters in respect of acquisition and passing of the award and allied matters. Are we competent to incorporate a schedule to amend that particular Act is the question that should be considered carefully and seriously. I do not know what the Law Department has advised. Can we amend the provisions of the Land Acquisition Act while making a legislation for State Highways. I am posing this question. It requires careful study and also advice by law experts, whether such a thing could be done.

Then there is clause 30, dealing with compensation for refusal of permission to build not to exceed difference between its value when it was refused and when it would have been granted. It is said that the compensation shall not exceed the difference between the value of the land as determined by sections 23 and 24 of the Land Acquisition Act, 1894, as amended by the schedule to this Act and the value which it would have had if the permission had been granted.

Supposing the value of that particular piece of land is Rs. 1,500 and supposing permission has been given to put up a building thereon, then the value would have been Rs. 2,000. So the difference is Rs. 500. According to clause 30 he should not be awarded more than Rs. 500. In my opinion it is very unreasonable so far as clause 30 is concerned; it works as a hardship. You are not paying even the market value of the land. So I request Government to reconsider this clause. I do not understand why such a clause has got to be incorporated here. You pay reasonable market value, reasonable compensation as contemplated under article 31.

clause 41 says:

> "Where any work which the Highway Authority is empowered to undertake by or under the provisions of this Act is undertaken, the officer authorsed by the State Government in this behalf shall give notice to the persons .. ...."

The benefit would arise only after the work is completed. The owner may not know or the person interested in the land may not know what is the benefit that he is going to derive by the Government taking up such work. This would arise after the Government does its part of the job. Government issue a notice saying that they are doing such and such work and it is likely to confer the benefit on you; that kind of notice may be issued. Actually the benefit is likely to be obtained only after the completion of the work. And the nature of the benefit the owner has derived and to what extent the benefit has been conferred upon him as a result of the work taken up, these are things that have got to be assessed only after the completion of the work and then only notice has got to be issued to the owner or the person interested in such land, who derives such benefit, directing him to pay betterment charges of the like contemplated here.

SRI VEERENDRA PATIL.—You please read clause 42 also.

Sri G. V. GOWDA.—Clause 42.

"...the officer authorised under Section 41 shall, after holding an inquiry in the prescribed manner and after hearing objection, if any, stated by the persons as required by notice under section 41, make an order. The order shall specify:
"(a) the lands benefited by the construction work";
(b) the increase in the value of such lands by the proposed construction......"

They have got a mode of enquiry and in the enquiry they will fix up the nature of the benefit and the extent of benefit, the increase in value, etc.

"Provided that no betterment charges shall be leviable in respect of any land:—
(i) which is unsuitable for development as a building site, or
(ii) which is situated beyond a distance of one furlong from the middle of the highway on either side."

A distance of one furlong means from the middle of the highway. Suppose the highway is 100 ft. in width; that is about 33 yards. $16\frac{1}{2}$ yards midway. One furlong from the middle of the highway, that is, 220 *plus* 16 yards=236 yards. The value of the land must have been increased for a length of 236 yards; is it practicable? In my opinion, it is not. If at all there is an increase in the value of the land, it is only in respect of the land adjacent to the highway, not interior.

Sri VEERENDRA PATIL.—If there is no increase in the value, he need not pay anything.

Sri G. V. GOWDA.—You say 'below one furlong, you cannot get exemption.' Suppose four acres are situated on the side of the highway and as a result of the work done, the value has increased. You cannot expect all the 20 acres adjaeent to that land is benefited by this work. Therefore, to put one furlong is unreasonable and it may work as a hardship to the persons who are owning lands by the side of the land adjacent to the highway.

Clause 53, relates to 'Consent of Highway Authority required to do certain acts on highway.' That is welcome.

"Notwithstanding anything contained in any other enactment for the time being in force but subject to the provisions of Section 72, no person other than the Highway Authority...shall construct..."

Clause 72 only speaks of framing of rules. I want the Minister to see whether it is 72 or 73. If it is 73, I have no objection.

Sri VEERENDRA PATIL.—Yes.

Sri G. V. GOWDA.—Under clause 63, 'village headman' is contemplated. We are aware that this village headman, Patel or Kulkarni is going to be removed and the panchayat will be entrusted with the village work. Such being the case, there is no need to include 'village headman.'

Clause 65 relates to 'summary eviction'.

"Any person wrongfully occupying any land,—
(a) which is a part of a highway,

(b) the occupation of which contravenes any of the provisions of this Act and the said provisions do not provide for the eviction of such person, shall be summarily evicted by the Deputy Commissioner in the prescribed manner..."

Under section 23, power is vested in the Highway Authority; why you give the same power to the Deputy. Commissioner. Under section 23, the Highway Authority evicts a person summarily. Under 65 (b), you want Deputy Commissioner to evict him summarily.

So far as the Schedule is concerned,

"2. Amendment of section 24 of Act I of 1894.—For section 24 of the Land Acquisition Act, 1894, the following shall be substituted, namely:—

"24. Matters to be neglected in determining compensation.- But the Court shall not take into consideration the following matters;—

(9) any increase in the value of the land by reason of the use thereof or any premises thereon in a manner which could be restrained by any court or is contrary to law or is detrimental to the health of the inmates fo the premises or to the public health."

Suppose by reason of these things, the person who owns the land is put to disadvantageous position. Should you not take that into consideration whille fixing the compensation? The overall picture is good except the minor changes that have got to be made by the Minister. I welcome this as a perfect measure and I hope that it is adopted and implemented as early as possible.

† ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ಹೆದ್ದಾರಿಗಳಿಗೆ ಸಂಬಂಧಪಟ್ಟ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಮಸೂದೆ ಮಂಡಿಸಿರುವುದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದನೆ ಅರ್ಪಿಸುತ್ತೇನೆ. ಈ ಮಸೂದೆ ಬಗ್ಗೆ ಒಂದೆರಡು ಸಲಹೆ ಕೊಡಲು ಬಯಸುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಹೆದ್ದಾರಿಗಳ ರಚನೆ ಮಾಡುವುದಕ್ಕೆ ಒಂದು ಸರಿಯಾದ ವ್ಯವಸ್ಥೆಯಾಗಬೇಕಾಗಿದೆ. ಇದುವರೆಗೆ ಇಂಥ ಕಾನೂನು ಇಲ್ಲದೇ ಇರುವುದರಿಂದ ಹೆದ್ದಾರಿಗಳ ನಿರ್ಮಾಣ ಮಾಡಲು ಅನೇಕ ಅಡ್ಡಿ, ಆತಂಕಗಳು ಬರುವುದು ಸ್ವಾಭಾವಿಕ. ಇಂಥ ಕಾನೂನು ಇರುವುದು ಅಗತ್ಯವಿದೆ.

